**<u>ದಿನಾಂಕಃ 09.03.2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.</u>**

**<u>ಪಾಟೀ ಸವಾಲು:- ಪ್ರತಿವಾದಿ ಪರ ಶ್ರೀ ಎಲ್.ಎ ವಕೀಲರಿಂದಃ</u>**

1) ಪ್ರತಿವಾದಿಗಳು ನನಗೆ ತೊಂದರೆ ಕೊಟ್ಟ ರೀತಿಯ ಅಕ್ಕಪಕ್ಕದ ಜನರಿಗೂ ತೊಂದರೆ ಕೊಡುತ್ತಿದ್ದಾರೆ ಎಂದು ತೋರಿಸುವ ಸಲುವಾಗಿ ನಿ.ಪಿ 12 ಮತ್ತು 13ರ ದಾಖಲೆಗಳನ್ನು ಹಾಜರುಪಡಿಸಿರುತ್ತೇನೆ. ಅಸಲು ದಾದಾ ಸಂಖ್ಯೆ 89/2025 ರ ಪ್ರಕರಣದಲ್ಲಿ ನಾನು ಪಕ್ಷಗಾರನಿರುವುದಿಲ್ಲ ಎಂದರೆ ಸರಿ. ಸದರಿ ಪ್ರಕರಣದಲ್ಲಿ ನನಗೆ ಸೇರಿದ ಯಾವುದೇ ಆಸ್ತಿಯನ್ನು ಸೇರಿಸಿರುವುದಿಲ್ಲ ಎಂದರೆ ಸರಿ. ಸದರಿ ಪ್ರಕರಣವನ್ನು ಸುಶೀಲ ಮತ್ತು ಇತರೆ ಎಂಟು ಜನರು ಕೂಡಿ ರಮೇಶ ಮತ್ತು ಲತಾ ರವರ ವಿರುದ್ಧ ಓಡಿರುತ್ತಾರೆ ಎಂದರೆ ಸರಿ. ಪ್ರಸ್ತುತ ಪ್ರಕರಣಕ್ಕೂ ಮತ್ತು ಅಸಲುದವ ಸಂಖ್ಯೆ 89/25 ರ ಪ್ರಕರಣಕ್ಕೂ ಸಂಬಂಧ ಇಲ್ಲ ಎಂದರೆ ಸರಿಯಲ್ಲ.

**ಮರು ವಿಚಾರಣೆ:- ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಗಣಕೀಕರಣ ಮಾಡಲಾಯಿತು).

ಓ. ಹೆ. ಕೇ. ಸರಿ ಇದೆ.

**ಪ್ರಧಾನ ದಿವಾಣಿ ಹಾಗೂ ಪ್ರ.ದ.ನ್ಯಾ. ದಂ.ಗಳ**
**ನ್ಯಾಯಾಲಯ, ಚನ್ನಪಟ್ಟಣ.**